ಮೈಸೂರು ವಿಭಾಗಕ್ಕೆ ಒಂದು, ಕೊಡಗಿಗೆ ಒಂದು, ಮುಂಬೈ ಕರ್ನಾಟಕಕ್ಕೆ ಒಂದು, ಹೈದ್ರಾಬಾದ್ ಕರ್ನಾಟಕಕ್ಕೆ ಒಂದು. ದಕ್ಷಿಣ ಕನ್ನಡ ಜಿಲ್ಲೆಗೆ ಒಂದು—ಹೀಗೆ ಬೇರೆ ಬೇರೆ ರೀತಿಯಲ್ಲಿ ಎಂಡೋಮೆಂಟ್ ಶಾಸನಗಳು ಜಾರಿಯಲ್ಲಿವೆ. ಇವೆಲ್ಲವನ್ನೂ ಕ್ರೋಢೀಕರಿಸಿ ಒಂದು ಕಾಂಪ್ರಹೆನ್ಸಿವ್ ಬಿಲ್‌ನ್ನು ತರುತ್ತೇವೆ ಎಂದು ಸರ್ಕಾರ ಆಗ ಹೇಳಿದ್ದರು. ಆದನ್ನು ಈ ಅಧಿವೇಶನದಲ್ಲಿಯೇ ತರುತ್ತೇವೆ ಎಂದು ಕೂಡ ಹೇಳಿದ್ದಾರೆ. ಅಂಥ ಒಂದು ವ್ಯವಸ್ಥೆ ಈ ಕಾರಿತಾಗಿ ಆಗಿದಯೇ ಎಂದು ದಯವಿಟ್ಟು ತಿಳಿಸಬೇಕು, ಹೊಗೆಯೇ ೧೯೫೯ರಲ್ಲಿ ನಿಗದಿ ಮಾಡಿದ ತಸ್ತೀಕ್‌ನ್ನು ಗಮನದಲ್ಲಿ ತೆಗೆದುಕೊಂಡರೆ, ಆಗ ರೂಪಾಯಿಯ ಬೆಲೆ ಎಷ್ಟಿತ್ತು ? ಈಗ ಎಷ್ಟಾಗಿದೆ ? ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಅರ್ಚಕರಿಗೆ ೩ ರೂಪಾಯಿಗಳನ್ನು ಸರ್ಕಾರದ ವತಿಯಿಂದ ಕೊಡುತ್ತಿದ್ದೀರಿ. ಅದನ್ನು ಕೊಡದಿರುವುದೇ ಒಳ್ಳೆಯದು ಎಂದು ಕಾಣುತ್ತದೆ. ಈಗಲಾದರೂ ಇಂಥ ನ್ಯೂನತೆಗಳನ್ನು ಈಗ ತರುವ ಬಿಲ್‌ನಲ್ಲಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಎರಡನೇ ಸಲ ಮಾಡಿದ್ದು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಯೂನಿಫಾರ್ಮ್ ಬೆಲೆ ತರುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಒಂದೊಂದು ಏರಿಯಾದಲ್ಲಿ ಒಂದೊಂದು ತರಹದ ಪದ್ಧತಿ ಇದೆ. ಅದಕ್ಕೆ ಯೂನಿಫಾರ್ಮ್ ಆರ್ಡರ್ ಮಾಡುತ್ತೇವೆ. ಕಾನೂನು ಇಲಾಖೆಯವರು ಸ್ಕ್ರೂಟಿನಿ ಮಾಡಿ ಕಳಿಸಿದರೆ ಇದೇ ಸೆಷನ್‌ನಲ್ಲಿ ತರುತ್ತೇವೆ, ಇಲ್ಲದಿದ್ದರೆ ಅಡಿಷನಲ್ಸ್ ಮುಂಖಾಂತರವಾದರೂ ಇತ್ಯಾ ಮಾಡುತ್ತೇವೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಕಂದಾಯ ಸಚಿವರೂ ಕೂಡ ತಸ್ತೀಕ್ ಕಡಿಮೆ ಇದೆ, ಯಾವುದಕ್ಕೂ ಸಾಲುವುದಿಲ್ಲ ಎಂದು ಹೇಳಿದರು. ೧೯೫೯ರ ತಸ್ತೀಕ್ ಆಕ್ಟ್ ಪ್ರಕಾರ ಅದು ಇದೆ. ನಾನು ಸರ್ಕಾರವನ್ನು ಅನೇಕ ವರ್ಷಗಳಿಂದ ಸದನದಲ್ಲಿ ಮತ್ತು ಮಂತ್ರಿಮಂಡಲದಲ್ಲಿದ್ದಾಗಲೂ ಒಂದು ಎಂಡೋಮೆಂಟ್ ಬೋರ್ಡ್ ಮಾಡಿ ಎಂದು ಕೇಳುತ್ತಿದ್ದೇನೆ. ಹಿಂದಿನ ಸರ್ಕಾರ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ನಮ್ಮ ದೇವಸ್ಥಾನಗಳು ಶಿಲ್ಪಕಲೆ ಅಥವಾ ಬೇರಾವುದೇ ರೀತಿಯಿಂದಲೂ ಒಳ್ಳೆಯ ದೇವಸ್ಥಾನಗಳೆ. ಅವುಗಳ ಮೇಂಟೆನೆನ್ಸ್ ಬಹಳ ಕಷ್ಟಕರವಾಗಿ ನಡೆಯುತ್ತಿದೆ. ಅವರಿಗೆ ಕೊಡುತ್ತಿರುವ ೩ ರೂಪಾಯಿ ಯಾವುದಕ್ಕೂ ಸಾಲುವುದಿಲ್ಲ. ಆದ್ದರಿಂದ ಸರ್ಕಾರ ಎಂಡೋಮೆಂಟ್ ಬೋರ್ಡ್‌ನ್ನು ಇನ್ನು ಮುಂದೆಯಾದರೂ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ನಾನು 'ಎ' ಗ್ರೇಡ್ ಕಾಯಿದೆ ತರುತ್ತೇವೆಂದು ಹೇಳಿದ್ದೇನೆ. ಅದು ಚರ್ಚೆಗೆ ಬಂದಾಗ ತಾವು ಸಲಹೆಗಳನ್ನು ಕೊಡಿ.

(ಶ್ರೀ ಆಂಜನೆಮೂರ್ತಿಯವರು ಗೈರು ಹಾಜರಾಗಿದ್ದಾರೆ.)

ಬರಗಾಲಕ್ಕೆ ತುತ್ತಾದ ಪ್ರದೇಶಗಳ ಅಭಿವೃದ್ಧಿ

೯೪. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಬರಗಾಲದ ಪರಿಸ್ಥಿತಿ ಉದ್ಭವವಾಗಿದೆ ?

ಆ) ಇಲ್ಲಿಯವರೆಗೆ ಬರಗಾಲ ಕಾಮಗಾರಿಗಳಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು)

ಇ) ಮುಂಬೈ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರದ ವಿಶೇಷ ಕಾರ್ಯಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ೨೫.

ಆ) ಜಿಲ್ಲಾವಾರು ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಿದೆ.

ಇ) ನೊಂದ ಸಂತ್ರಸ್ತರಿಗೆ ಉದ್ಯೋಗ ಒದಗಿಸುವುದು, ನೀರಾವರಿ, ಭೂ ಸಂರಕ್ಷಣೆ, ಅರಣ್ಯಾಭಿವೃದ್ಧಿ, ರಸ್ತೆ ನಿರ್ಮಾಣ, ತೆರೆದ ಬಾವಿ ಹಾಗೂ ಕೊಳವೆ ಬಾವಿಗಳ ನಿರ್ಮಾಣ ಇತ್ಯಾದಿ ಕಾರ್ಯಕ್ರಮಗಳನ್ನು 'ಯೋಜನಾ ಕಾರ್ಯಗಳಡಿಯಲ್ಲಿ ಕೈಗೊಳ್ಳಲಾಗುತ್ತಿದೆ. ಇವುಗಳ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಭಾವ ಪರಿಹಾರದಡಿಯಲ್ಲಿ ಹಣವನ್ನು

ಬಿಡುಗಡೆ ಮಾಡಲಾಗಿತ್ತು. ಈ ಕಾರ್ಯಕ್ರಮಗಳಲ್ಲಿ ಶಾಶ್ವತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಇರುತ್ತವೆ.

Details of Amounts Released under Drought Relief During 1990-91 (Upto 17-11-1990)

(Rupees in lakhs)

Sl. No.	Name of the District	Drought			Relief		
		Drinking Water Supply	Supply of Fodder	Agricultural Minikites	Special Nutrition	Employment Generation	Total
1	2	3	4	5	6	7	8
1	Bangalore (U)	10-00	...	...	...	...	10-00
2	Bangalore (R)	12-00	...	...	...	13-00	25-00
3	Kolar	50-00	2-00	..	...	80-00	132-00
4	Tumkur	38-50	2-00	...	...	73-00	113-50
5	Chitradurga	24-00	2-00	...	...	54-00	80-00
6	Shimoga	3-00	...	...	...	45-00	48-00
7	Mysore	30-50	5-00	3-00	1-00	90-00	128-50
8	Mandya	27-00	3-00	1-00	1-00	67-00	99-00
9	Chickmagalore	13-00	3-00	...	...	24-00	40-00
10	Hassan	34-00	5-00	2-00	1-00	75-00	117-00
11	Kodagu	5-00	..	...	...	...	5-00
12	D. Kannada	6-00	...	...	...	...	6-00
13	Gulbarga	31-00	...	3-00	...	...	34-00
14	Bidar	8-00	...	...	...	...	8-00
15	Raichur	14-00	...	...	...	15-00	29-00
16	Bellary	9-00	...	...	...	18-00	27-00
17	Belgaum	29-00	...	...	...	10-00	39-00
18	Bijapur	33-00	...	...	...	38-00	71-00
19	Dharwad	82-00	...	3-00	...	72-00	157-00
20	U. Kannada	...	...	...	...	...	...
21	BVOs	...	...	...	...	...	...
	Total	459-00	22-00	11-00	3-00	674-00	1169-00

ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್ — ಮಂತ್ರಿಗಳೇ ನಮ್ಮ ಹಾವೇರಿ ಜಿಲ್ಲೆಗಳಲ್ಲಿ ಬರಗಾಲ ಇದೆಯೆಂದು ಹೇಳಿದ್ದಾರೆ. ದುರ್ದೈವದಿಂದ ಏನಾಗಿದೆ ಎಂದರೆ, ಒಬ್ಬ ಮಂತ್ರಿ ಕೂಡ ಬರಗಾಲದ ಪರಿಸ್ಥಿತಿಯನ್ನು ನೋಡಲಿಕ್ಕೆ ಹೋಗಿಲ್ಲ. ಎಲ್ಲ ಜಿಲ್ಲೆ ಬರೀ ಚಾರ್ಜ್ ಅಷ್ಟೆ. ಅಷ್ಟೇ ವೇಗದಲ್ಲಿ ಕೆಲಸಗಳು ನಡೆದಿಲ್ಲ. ಬರಗಾಲ ಕಾಮಗಾರಿ ಅಡಿಯಲ್ಲಿ ನೋಡಲು ಮಾಡುತ್ತಿದ್ದು ಮಧ್ಯೆ ನಿಂತಿರುವ ಕಾರ್ಯಗಳನ್ನು ಈಗ ಮುಂದುವರೆಸುತ್ತೀರಾ? ಮತ್ತು ೧೫ ಜಿಲ್ಲೆಗಳಲ್ಲಿ ನೀವು ಕೈಗೊಂಡಿರುವ ಪರಿಹಾರ ಕಾರ್ಯಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಸರ್ಕಾರ ಎಲ್ಲೆಲ್ಲಿ ಬರಗಾಲ ಇದೆಯೋ ಅಲ್ಲಿಗೆ ಸುಮಾರು ೧೪ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕೆಲಸ ತೆಗೆದುಕೊಂಡಿಲ್ಲ ಎಂಬುದು ಇಲ್ಲ. ಆದರೆ ಪ್ರತಿ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದೇವೆಂದು ಬೇಕಾದರೆ ಹೇಳುತ್ತೇನೆ. ಹೇಗಿದ್ದರೂ ರಿಪ್ಲೈ ಆದ ಮೇಲೆ ಈ ಬಗ್ಗೆ ಚರ್ಚೆ ಇದೆ. ಆಗ ಎಲ್ಲ ವಿವರ ಕೊಡುತ್ತೇನೆ. ಆಗ ನಿಮ್ಮ ತಾಲ್ಲೂಕಿನ ಬಗ್ಗೆಯೂ ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಸಚಿವರು ಬೇಕಾದರೆ ಹೇಳಿಕೆ ಕೊಡುತ್ತೇನೆ ಎಂದು ಹೇಳಿದರು. ಅದು ಬೇಕಾದರೆ ಅಲ್ಲ. It is a commitment on the part of the Government. The Business Advisory Committee went into this question in detail. The Chief Minister has assured that he will make a statement on behalf of the government. Then the discussion is taken. ಅಲ್ಲಿ ತಾವೂ ಇದ್ದಿರಿ. ದಯವಿಟ್ಟು ಹೇಳಿಕೆ ಮಾಡುತ್ತೀರೊ ಇಲ್ಲವೋ, ಅಷ್ಟು **ಹೇಳಿ.**

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರ ತಾಲ್ಲೂಕಿನ ಬಗ್ಗೆ ಕೇಳಿದ್ದಕ್ಕೆ ಅವರಿಗೆ ಆ ರೀತಿ ಹೇಳಿದೆ. ಎಲ್ಲ ಸೇರಿಸಿ ಅಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಅಧ್ಯಕ್ಷರೇ, ಬರಗಾಲ ಬಂದಾಗ ಮಾತ್ರ ಇಲ್ಲಿ ಚರ್ಚೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ಹಲವಾರು ಕಡೆ ಸದಾಕಾಲ ಬರಗಾಲ ಇದ್ದೇ ಇದೆ. ಇದರ ಬಗ್ಗೆ ವಿಶೇಷವಾಗಿ ಪ್ಲಾನಿಂಗ್ ಇಲಾಖೆಯವರು ಕೆಲಸ ಮಾಡಬೇಕಾಗುತ್ತದೆ. ಆದರೆ ಕೆಲಸ ಆಗುತ್ತಿಲ್ಲ ಕೆಲಸ ಇಲ್ಲ ಎಂದರೆ ನಾವು ಬರದು ಕೊಟ್ಟ ಮೇಲೆ ಶುರುವಾಗುತ್ತದೆ ಆ ಮೇಲೆ ನಿಂತು ಹೋಗುತ್ತದೆ. ನಮ್ಮ ಕಡೆ ಒಂದು ಕೆರೆ ೧೯೮೩ ರಲ್ಲಿ ಪ್ರಾರಂಭವಾಗಿ ೬೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮಧ್ಯಕ್ಕೆ ನಿಂತಿದೆ. ಯಾರ್ಯಾರೋ ಬಿಲ್ ಮಾಡಿಕೊಂಡು ತಿನ್ನುತ್ತಿದ್ದಾರೆ. ಅದಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಎಲ್ಲ ಶಾಸಕರನ್ನೂ ಕರೆದು, ಅಧ್ಯಯನ ಮಾಡಿ ಯಾವ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸಚಿವರು ಚರ್ಚಿಸಬೇಕು. ಬೇರೆ ಸಚಿವರೂ ಕೂಡ ಪ್ರತಿ ಜಿಲ್ಲೆಗೆ ವಿಸಿಟ್ ಕೊಡಬೇಕಾಗುತ್ತದೆ. ಬರಗಾಲ ಪ್ರದೇಶದಲ್ಲಿ ಸಚಿವರು ಪರಿಹಾರ ಕಾರ್ಯಗಳನ್ನು ಯಾವಾಗ ಮಾಡುತ್ತಾರೆಂದು ಹೇಳಲಿ.

೧೧.೪೫ ಎ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ನಮ್ಮ ಡಿಪಾರ್ಟ್‌ಮೆಂಟ್ ಬಗ್ಗೆ ಎಲ್ಲರೂ ಕೂಡಾ ಕೇಳುವುದು ಬರಗಾಲದಲ್ಲಿಯೇ. ಸ್ಕೇರ್‌ಸಿಟಿ ಬಂದಾಗಲೇ ಕೇಳುವುದು ಬಾಕಿ ಟೈಮ್‌ನಲ್ಲಿ ಯಾರೂ ನಮ್ಮಲ್ಲಿ ಬರುವುದಿಲ್ಲ. ಮಾನ್ಯ ಸದಸ್ಯರು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಇದನ್ನು ಸರಿ ಮಾಡಬೇಕು ಎಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನು ಖಂಡಿತವಾಗಿಯೂ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರಲ್ಲಿ ಕೇಳಿ ಏನಾದರೂ ಶಾಶ್ವತವಾದಂಥ ಕೆಲವು ಪರಿಹಾರವನ್ನು ಮಾಡಬೇಕು ಎಂದು ಹೇಳುವುದರಲ್ಲಿ ನಾನು ಕೂಡಾ ಭಾಗಿಯಾಗುತ್ತೇನೆ.

ಶ್ರೀ ಎನ್. ಜಿ. ನಾಯ್ಕ್.— ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರ ಹತ್ತಾರು ವರ್ಷಗಳಿಂದ ಬರಗಾಲ ಪೀಡಿತ ಪ್ರದೇಶವಾಗಿದೆ. ಮಾನ್ಯ ಸಚಿವರು ಹಣವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಮ್ಮಲ್ಲಿ ದನಕರುಗಳಿಗೆ ಮೇವಿಲ್ಲ, ದನಗಳು ಸಾಯುತ್ತಿವೆ. ನಮ್ಮಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಆಗಿಲ್ಲ. ನಾನು ಮಾನ್ಯ ಸಚಿವರಿಗೆ ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ. ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮ ಕ್ಷೇತ್ರ ಕರ್ನಾಟಕದಲ್ಲಿಯೇ ಬಹಳ ಹಿಂದುಳಿದಿರತಕ್ಕಂಥ ಕ್ಷೇತ್ರ. ನನ್ನ ಕ್ಷೇತ್ರ ಒಂದೇ ಅಲ್ಲ, ಚಳ್ಳಕೆರೆ ತಾಲ್ಲೂಕು ಕೂಡ ಹಿಂದುಳಿದಿರತಕ್ಕಂಥ ಕ್ಷೇತ್ರ. ಈ ಎರಡೂ ಬಹಳ ಹಿಂದುಳಿದ ಕ್ಷೇತ್ರಗಳು. ಆದಕ್ಕೋಸ್ಕರ ದಯವಿಟ್ಟು ಇನ್ನು ಮೇಲಾದರೂ ಮಾನ್ಯ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಗಮನವನ್ನು ಕೊಡಬೇಕು ಎಂದು ನಾನು ಕಳಕಳಿಯಿಂದ ತಮ್ಮ ಮುಖೇನ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಸದಸ್ಯರು ಏನು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ ನಾನು ನನ್ನ ಕೈಯಲ್ಲಿ ಸಾಧ್ಯವಾದಷ್ಟು ಸಹಾಯ ಮಾಡುತ್ತೇನೆಂದು ಹೇಳುತ್ತೇನೆ.